ಬೆಳೆ ವಿಮೆ :

451 (5121) ಶ್ರೀ ಪಾಟೀಲ್ ಡಿ. ಆರ್ (ಗದಗ್) :– ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳೆ ವಿಮೆ ನಿರ್ಧರಿಸುವ ಮಾನದಂಡಗಳು ಯಾವುವು;

ಆ) ಇದಕ್ಕೆ ಈಗಿರುವ ಹೋಬಳಿ ಒಂದು ಘಟಕ ಎಂದು ಪರಿಗಣಿಸದೇ ಗ್ರಾಮ ಪಂಚಾಯಿತಿಯನ್ನು ಒಂದು ಘಟಕವನ್ನಾಗಿ ಮಾಡಲು ಇರುವ ತೊಂದರೆಗಳೇನು;

ಇ) ಒಂದೇ ಪಂಚಾಯಿತಿ ಕ್ಷೇತ್ರದಲ್ಲಿ ಮಳೆ ಬೇರೆ ಬೇರೆ ಪ್ರಮಾಣದಲ್ಲಿ ಆಗುತ್ತಿರುವುದರಿಂದ ಹಾಗೂ ಇಳುವರಿ ಈ ಮಳೆ ಆಧರಿಸಿರುವುದರಿಂದ ಈಗಿರುವ ಹೋಬಳಿ ಕ್ಷೇತ್ರ ಆಧರಿಸಿ ಬೆಳೆ ವಿಮೆ ನಿರ್ಧರಿಸುವುದು ರೈತರಿಗೆ ಹಾನಿಕಾರಕವಲ್ಲವೇ;

ಈ) ಈ ಬೆಳೆ ವಿಮೆ ನಿರ್ಧರಿಸುವ ವಿಧಾನವನ್ನು ರೈತರ ಹಿತರಕ್ಷಣೆ ಮಾಡುವಂತೆ ರೂಪಿಸಲು ಇರುವ ತೊಂದರೆಗಳೇನು;

ಉ) ಈ ತೊಂದರೆಗಳನ್ನು ನಿವಾರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಕೆ. ಶ್ರೀನಿವಾಸ ಗೌಡ (ಮಾನ್ಯ ಕೃಷಿ ಸಚಿವರು) :

ಅ) ರಾಷ್ಟ್ರೀಯ ಕೃಷಿ ವಿಮಾ ಯೋಜನೆಯು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ಯೋಜನೆಯ ಬಗ್ಗೆ ರಚಿಸಿರುವ ಮಾರ್ಗಸೂಚಿಯನ್ವಯ ವಿಮೆ ಮಾಡಿಸಿದ ರೈತರು ಬೆಳೆ ವಿಮಾ ನಷ್ಟ ಪರಿಹಾರ ಪಡೆಯಬೇಕಾದಲ್ಲಿ ವಿಮೆಗೆ ಒಳಪಟ್ಟ ಬೆಳೆಯ ಬೆಳೆ ಕಟಾವು ಪ್ರಯೋಗಗಳ ಆಧಾರದ ಮೇಲೆ ಕಂಡುಹಿಡಿಯಲಾದ ವಾಸ್ತವಿಕ ಇಳುವರಿಯ ಕೊರತೆಗನುಗುಣವಾಗಿ ಆ ಕ್ಷೇತ್ರದಲ್ಲಿ ಆ ಬೆಳೆಗೆ ವಿಮೆ ಮಾಡಿಸಿದ ಎಲ್ಲಾ ರೈತರು ಬೆಳೆ ವಿಮಾ ನಷ್ಟ ಪರಿಹಾರ ಪಡೆಯಲು ಅರ್ಹರು. ವಾಸ್ತವಿಕ ಇಳುವರಿಯು ಪ್ರಾರಂಭಿಕ ಇಳುವರಿಗಿಂತ ಹೆಚ್ಚಾಗಿದ್ದಲ್ಲಿ ರೈತರು ಬೆಳೆ ವಿಮಾ ನಷ್ಟ ಪರಿಹಾರ ಪಡೆಯಲು ಅರ್ಹರಾಗಿರುವುದಿಲ್ಲ.

ಆ) ಕೇಂದ್ರ ಸರ್ಕಾರವು ರಚಿಸಿರುವ ಮಾರ್ಗಸೂಚಿಯಂತೆ ಗ್ರಾಮ ಪಂಚಾಯತಿ ಮಟ್ಟಕ್ಕೆ ಬೆಳೆಗಳನ್ನು ಅಧಿಸೂಚಿಸಿದರೆ ಪ್ರತಿ ಬೆಳೆಗೆ ಕನಿಷ್ಟ 8 ಬೆಳೆ ಕಟಾವು ಪ್ರಯೋಗಗಳನ್ನು ನಡೆಸಬೇಕಾಗುತ್ತದೆ. ಈಗ 2004–05ನೇ ಸಾಲಿನಿಂದ ಸುಮಾರು ವಾರ್ಷಿಕ 77000 ಬೆಳೆ ಕಟಾವು ಪ್ರಯೋಗಗಳನ್ನು ನಡೆಸಲಾಗುತ್ತಿದ್ದು, ಗ್ರಾಮ ಪಂಚಾಯತಿ ಮಟ್ಟದಲ್ಲಿ

ಬೆಳೆಗಳನ್ನು ಅಳವಡಿಸಿದರೆ ಸುಮಾರು 2.50 ಲಕ್ಷ ಬೆಳೆ ಕಟಾವು ಪ್ರಯೋಗಗಳನ್ನು ನಡೆಸಬೇಕಾಗುತ್ತದೆ. ಇದಕ್ಕೆ ಹೆಚ್ಚಿನ ಸಿಬ್ಬಂದಿ ಮತ್ತು ಸವಲತ್ತುಗಳ ಅವಶ್ಯಕತೆ ಇರುವುದರಿಂದ, ಇದನ್ನು ಒದಗಿಸಲು ಸರ್ಕಾರ ಯೋಚಿಸುತ್ತಿದೆ. ಕೇಂದ್ರ ಸರ್ಕಾರವು ಯೋಜನೆಯ ಮಾರ್ಗಸೂಚಿಯಲ್ಲಿ ಕೆಲವು ಮುಖ್ಯ ಬದಲಾವಣೆಗಳನ್ನು ತರುತ್ತಿದ್ದು, ಕೆಲವು ಮುಖ್ಯ ಬೆಳೆಗಳನ್ನು ಗ್ರಾಮ ಪಂಚಾಯತಿ ಮಟ್ಟಕ್ಕೆ 2006–07ನೇ ಸಾಲಿನಿಂದ ತರಲು ಕ್ರಮ ಕೈಗೊಳ್ಳುತ್ತಿದೆ.

ಇ) ಹೌದು. ಇದನ್ನು ನಿವಾರಿಸಲು 2005ರ ಮುಂಗಾರು ಹಂಗಾಮಿನ ಸರ್ಕಾರಿ ಆದೇಶದಲ್ಲಿ ಒಂದು ಹೋಬಳಿಯಲ್ಲಿ ಒಂದಕ್ಕಿಂತ ಹೆಚ್ಚಿನ ಕೃಷಿ ಹವಾಮಾನ ವಲಯ ಇದ್ದರೆ, ಬೆಳೆ ಕಟಾವು ಪ್ರಯೋಗಗಳನ್ನು ಕೃಷಿ ಹವಾಮಾನ ವಲಯಗಳು ಆವರಿಸಿದ ಕ್ಷೇತ್ರಕ್ಕನುಗುಣವಾಗಿ ನಿಗದಿಪಡಿಸಿ ತೆಗೆದುಕೊಳ್ಳಲು ಆದೇಶಿಸಲಾಗಿದೆ.

ಈ) ಭಾರತ ಸರ್ಕಾರವು ರೂಪಿಸಿರುವ ರಾಷ್ಟ್ರೀಯ ಕೃಷಿ ವಿಮಾ ಯೋಜನೆಯ ಮಾರ್ಗಸೂಚಿಯಲ್ಲಿ ಪ್ರಾರಂಭಿಕ ಇಳುವರಿಯನ್ನು ನಿರ್ಧರಿಸಲು ಭತ್ತ ಮತ್ತು ಗೋಧಿ ಬೆಳೆಗಳಿಗೆ ಚಾಲಿತ ಮೂರು ವರ್ಷಗಳ ಸರಾಸರಿ ಇಳುವರಿ, ಇತರೆ ಬೆಳೆಗಳಾದಲ್ಲಿ 5 ವರ್ಷಗಳ ಸರಾಸರಿ ಇಳುವರಿ ಆಧಾರದ ಮೇಲೆ ಕಂಡುಹಿಡಿಯಲಾಗುತ್ತದೆ. ರಾಜ್ಯದಲ್ಲಿ ಸತತವಾಗಿ ಮೂರು ವರ್ಷ ಬರಗಾಲವಿದ್ದುದರಿಂದ, ಪ್ರಾರಂಭಿಕ ಇಳುವರಿಯು ಕಡಿಮೆಯಾಗುತ್ತಾ, ರೈತರು ಬೆಳೆ ವಿಮಾ ನಷ್ಟ ಪರಿಹಾರ ಪಡೆಯುವಲ್ಲಿ ಅಂತಹ ಅನುಕೂಲಗಳು ಆಗುತ್ತಿಲ್ಲವೆಂದು ರೈತ ಸಮುದಾಯದಿಂದ ಬೇಡಿಕೆ ಇರುತ್ತದೆ. ಆದರೆ, ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಬರಗಾಲವಲ್ಲದ ವರ್ಷಗಳ ಇಳುವರಿ ಮಾಹಿತಿಯನ್ನು ಪರಿಗಣಿಸಲು ಅವಕಾಶವಿರುವುದಿಲ್ಲ.

ಉ) ಹೌದು. ಈಗಾಗಲೇ ರಾಜ್ಯ ಸರ್ಕಾರವು ಬರಗಾಲವಲ್ಲದ ವರ್ಷಗಳ ಇಳುವರಿ ಮಾಹಿತಿಯನ್ನು ಪರಿಗಣಿಸಿ ಪ್ರಾರಂಭಿಕ ಇಳುವರಿಯನ್ನು ಕಂಡುಹಿಡಿಯಲು ಯೋಜನೆಯ ಮಾರ್ಗಸೂಚಿಯಲ್ಲಿ ಸೂಕ್ತ ಮಾರ್ಪಾಟು ತರುವಂತೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತದೆ. ಕೇಂದ್ರ ಸರ್ಕಾರವು 2006–07ನೇ ಸಾಲಿನಿಂದ ಯೋಜನೆಯ ಮಾರ್ಗಸೂಚಿಯಲ್ಲಿ ಕೆಲವೊಂದು ಮಾರ್ಪಾಟುಗಳನ್ನು ಹಾಗೂ ಸುಧಾರಣೆಗಳನ್ನು ತಂದು ಹೊಸ ಯೋಜನೆಯನ್ನು ಅನುಷ್ಠಾನಗೊಳಿಸಲು ಯೋಜಿಸಿದೆ.